

# ಘಮಘಮಿಸುತಿದೆ ಕರೆಯೋಲೆ



ಇಂದಿನ ಡಿಜಿಟಲ್ ಯುಗದಲ್ಲೂ ಈ ಕಾಗದದ ಆಮಂತ್ರಣ ಪತ್ರಿಕೆಗಳು ಘಮ ಘಮ ಎಂದು ಸುವಾಸನೆಯನ್ನು ಸೂಸುತ್ತಾ ಮಾರುಕಟ್ಟೆಯಲ್ಲಿ ಹೊಸ ಟ್ರೆಂಡ್ ಸೃಷ್ಟಿಸಿವೆ. ಮದುವೆ, ಗೃಹ ಪ್ರವೇಶ ಇನ್ನಿತರ ಕಾರ್ಯಕ್ರಮಕ್ಕೆ ಇದು ಜನರ ಫೇವರೆಟ್ ಆಯ್ಕೆಯ ಕಾರ್ಡ್ ಎನಿಸಿಕೊಂಡಿರುವುದು ವಿಶೇಷ.

■ **ಸುರೇಂದ್ರ ಪೈ, ಭಟ್ಕಳ**

ಅದೊಂದು ಕಾಲವಿತ್ತು. ಮದುವೆ, ಉಪನಯನ, ಗೃಹಪ್ರವೇಶ... ಹೀಗೆ ಯಾವುದೇ ಶುಭ ಕಾರ್ಯಕ್ಕೆ ಬಂಧು ಮಿತ್ರರು, ಸ್ನೇಹಿತರನ್ನು ಆಹ್ವಾನಿಸುವಾಗ ಅಕ್ಷತೆಯನ್ನು ಆಮಂತ್ರಣವಾಗಿ ನೀಡುತ್ತಿದ್ದೆವು. ಕಾಲ ಬದಲಾದ ಹಾಗೇ ಅಕ್ಷತೆಯ ಬದಲು ಕಾಗದದ ಆಮಂತ್ರಣ ಪತ್ರಿಕೆ ಚಾಲ್ತಿಗೆ ಬಂದಿತು. ವಿವಿಧ ವಿನ್ಯಾಸವುಳ್ಳ ಆಮಂತ್ರಣ ಪತ್ರಿಕೆಗಳು ಒಂದೆರಡು ಶತಮಾನಗಳಷ್ಟು ಕಾಲ ಎಲ್ಲೆಡೆ ಬಹು ಬೇಡಿಕೆಯನ್ನು ಪಡೆದವು. ನಂತರ ಇತ್ತೀಚಿನ ಕೆಲವು ವರ್ಷಗಳಲ್ಲಿ ತಂತ್ರಜ್ಞಾನದ ಪರಿಣಾಮದಿಂದಾಗಿ ಮೊದಲಿದ್ದ ಕಾಗದದ ಆಮಂತ್ರಣ ಪತ್ರಿಕೆಯ ಬದಲಾಗಿ ಡಿಜಿಟಲ್ ಇನ್ವಿಟೇಷನ್ ಕಾರ್ಡ್, ವಿಡಿಯೊ ಹೆಚ್ಚು ಟ್ರೆಂಡ್‌ನಲ್ಲಿದೆ. ಹೀಗೊಂದು ಡಿಜಿಟಲ್ ಮಾಧ್ಯಮವು ತನ್ನದೇ ಟ್ರೆಂಡ್ ಸೆಟ್ ಮಾಡಿರುವಾಗ ಇಂದು ನನ್ನ ವಿದ್ಯಾರ್ಥಿಯೊಬ್ಬ ತನ್ನ ಮನೆಯ ಗೃಹಪ್ರವೇಶದ ಆಮಂತ್ರಣ ಪತ್ರಿಕೆಯಾಗಿ ನೀಡಿದ 'ಸುಗಂಧ ದ್ರವ್ಯದ ಪರಿಮಳ ಸೂಸುವ ಕಾಗದದ ಆಮಂತ್ರಣ ಪತ್ರಿಕೆ' ನನ್ನ ಗಮನಸೆಳೆಯಿತು.

ಡಿಜಿಟಲ್ ಯುಗದಲ್ಲೂ ಈ ಕಾಗದದ ಆಮಂತ್ರಣ ಪತ್ರಿಕೆಗಳು ಘಮ ಘಮ ಎಂದು ಸುವಾಸನೆಯನ್ನು ಸೂಸುತ್ತಾ ಮಾರುಕಟ್ಟೆಯಲ್ಲಿ ಹೊಸ ಟ್ರೆಂಡ್ ಸೃಷ್ಟಿಸಿವೆ. ಮದುವೆ, ಗೃಹ ಪ್ರವೇಶ ಇನ್ನಿತರ ಕಾರ್ಯಕ್ರಮಕ್ಕೆ ಇದು ಜನರ ಫೇವರೆಟ್ ಆಯ್ಕೆಯ ಕಾರ್ಡ್ ಎನಿಸಿಕೊಂಡಿರುವುದು ವಿಶೇಷ.

ನೋಡಲು ಮಾಮೂಲಿ ವಿನ್ಯಾಸದಂತೆ ತೋರುವ ಈ ಕಾರ್ಡ್ ಮನಕ್ಕೆ ಹಿತವಾದ ಶ್ರೀಗಂಧದ ಕಂಪನ್ನು ಸೂಸುತ್ತದೆ. ಸಾಮಾನ್ಯವಾಗಿ ನಮ್ಮವರು ನೀಡಿದ ಆಮಂತ್ರಣ ಪತ್ರಿಕೆಯನ್ನು ಒಮ್ಮೆ ನೋಡಿ ಪಕ್ಕಕ್ಕಿಡುವುದು, ಕಾರ್ಯಕ್ರಮದ ಬಳಿಕ ಎಸೆಯುವುದು, ಹರಿದು ಹಾಕುತ್ತೇವೆ. ಆದರೆ ಈ ಸುವಾಸನೆ ಭರಿತವಾದ ಕಾರ್ಡ್ ಅನ್ನು ಮಾತ್ರ ಜನರು ಅಷ್ಟು ಸುಲಭವಾಗಿ ಎಸೆಯಲು ಹೋಗಲಾರರು. ಈ ಸೆಂಟ್ ಆಮಂತ್ರಣ ಪತ್ರಿಕೆಯು ಕನಿಷ್ಠವೆಂದರೂ ಒಂದು ವಾರದಿಂದ ಒಂದು ತಿಂಗಳವರೆಗೂ ಮನೆ ಕೋಣೆಯೊಳಗೆ ಪರಿಮಳವನ್ನು ಬೀರುತ್ತದೆ. ಈ ಆಮಂತ್ರಣ ಪತ್ರಿಕೆಯು ಸುವಾಸನೆ ಬೀರುವಾಗಲೆಲ್ಲಾ ನಿಮ್ಮನ್ನು ಆಹ್ವಾನಿಸಿದ ಪ್ರೀತಿ ಪಾತ್ರರು ಪದೇ ಪದೇ ನಿಮಗೆ ನೆನಪಾಗುತ್ತಾರೆ. ನಾವೊಮ್ಮೆ ಮರೆತರು ಸಹ ಪರಿಮಳವು ಕಾರ್ಯಕ್ರಮದ ದಿನಾಂಕ ನೆನಪಿಸುವ ಕೆಲಸ ಮಾಡುತ್ತದೆ. ಕಾರ್ಯಕ್ರಮ ಮುಗಿದ ಬಳಿಕವು ಸಹ ಕಾರ್ಯಕ್ರಮದ ಸವಿ ಕ್ಷಣಗಳನ್ನು ಈ ಸುವಾಸನೆ ಮತ್ತೆ ಜೀವಂತವಾಗಿರಿಸುತ್ತದೆ.



ಮದುವೆಯ ಆಮಂತ್ರಣ ಪತ್ರಗಳನ್ನು ವಿಳಾಸ ಮಾಡಿ ಕಳುಹಿಸುವ ಸಂಪ್ರದಾಯವು 19ನೇ ಶತಮಾನದಲ್ಲಿ ಭಾರತದಲ್ಲಿ ಪ್ರಚಲಿತಕ್ಕೆ ಬಂದು ಹೆಚ್ಚು ಜನಪ್ರಿಯಗೊಂಡವು. ಈ ಕಲ್ಪನೆಯನ್ನು ಬ್ರಿಟಿಷ್ ಸಂಸ್ಕೃತಿಯಿಂದ ಅಳವಡಿಸಿಕೊಳ್ಳಲಾಯಿತು. ಆರಂಭದಲ್ಲಿ, ಕಾರ್ಡ್‌ಗಳನ್ನು ವಿಕ್ಟೋರಿಯನ್ ಆಮಂತ್ರಣ ಪತ್ರಗಳಿಂದ ಕ್ಲೋನ್ ಮಾಡಲಾಗುತ್ತಿತ್ತು. ಪಶ್ಚಿಮದೊಂದಿಗೆ ವಸಾಹತುಶಾಹಿ ಪದ್ಧತಿಗಳು ಮತ್ತು ಶಿಷ್ಟಾಚಾರಗಳನ್ನು ಹಂಚಿಕೊಳ್ಳಲು ಉತ್ಸುಕರಾಗಿದ್ದ ಭಾರತೀಯ ರಾಜಮನೆತನವು ವಿವಾಹ ಆಮಂತ್ರಣ ಪತ್ರ ಮುದ್ರಿಸಲು ಉತ್ಸಾಹದಿಂದ ಮುಂದಾಯಿತು.

ವಿಕ್ಟೋರಿಯನ್ ಯುಗದಿಂದ ಹುಟ್ಟಿಕೊಂಡ ಈ ಪರಿಮಳಯುಕ್ತ ಆಮಂತ್ರಣ ಪತ್ರಗಳನ್ನು ಪತ್ರ ವ್ಯವಹಾರಕ್ಕೆ ಐಷಾರಾಮಿ ಮತ್ತು ವೈಯಕ್ತಿಕ ಸ್ಪರ್ಶವನ್ನು ನೀಡುವಂತೆ ವಿನ್ಯಾಸಗೊಳಿಸಲಾಯಿತು. ಶತಮಾನಗಳಷ್ಟು ಹಿಂದೆ ಮಹಿಳೆಯರು ಆತ್ಮೀಯತೆಯನ್ನು ವ್ಯಕ್ತಪಡಿಸಲು ಪರಿಮಳಯುಕ್ತ ಕಾಗದವನ್ನು ಬಳಸುತ್ತಿದ್ದರು. ವಿಶೇಷವಾಗಿ ಯುದ್ಧದ ಸಮಯದಲ್ಲಿ, ಸೈನಿಕರಿಗೆ ಸಾಂತ್ವನ ಮತ್ತು ಮನೆಯ ಜ್ಞಾಪನೆಯನ್ನು ನೀಡಲು ಮಹಿಳೆಯರು ಕಾರ್ಡ್‌ಗಳ ಮೇಲೆ ಸುಗಂಧ ದ್ರವ್ಯಗಳನ್ನು ಸಿಂಪಡಿಸಿ ನೀಡುತ್ತಿದ್ದರು. ಪ್ರಸ್ತುತ ಆಧುನಿಕ, ಪರಿಸರ ಸ್ನೇಹಿ ಉತ್ಪನ್ನಗಳು ಸಸ್ಯಜನ್ಯ ತೈಲಗಳು ಮತ್ತು ವಿಶೇಷ ಪರಿಮಳಯುಕ್ತ ಚಿಪ್‌ಗಳನ್ನು ಬಳಸುತ್ತಿವೆ.

ಈ ಕಾರ್ಡ್ ಬೆಂಗಳೂರಿನ ಚಿಕ್ಕಪೇಟೆ ಹಾಗೂ ಎಲ್ಲಾ ಮಹಾನಗರಗಳಲ್ಲಿ ಲಭ್ಯವಿದೆ. ಇದನ್ನು ತಯಾರಿಸಲು ಸೆಂಟ್ ಕಾಗದವನ್ನು ಬಳಸಲಾಗುತ್ತದೆ. ಜೊತೆಗೆ ನಮಗೆ ಬೇಕಾದ ವಿವಿಧ ಸುಗಂಧದ್ರವ್ಯದ ಪರಿಮಳದ ಆಯ್ಕೆಯ ಮಾಡಿಕೊಳ್ಳಬಹುದು. ಪರಿಮಳ ಹಾಗೂ ವಿನ್ಯಾಸಕ್ಕೆ ತಕ್ಕಂತೆ 15 ರೂಪಾಯಿಯಿಂದ 1000 ರೂಪಾಯಿವರೆಗೂ ಕಾರ್ಡ್‌ಗಳು ಲಭ್ಯವಿವೆ. ತಮ್ಮಿಷ್ಟದ ಕಾರ್ಡ್ ಆಯ್ಕೆ ಮಾಡಿಕೊಟ್ಟ ಕೇವಲ ಎರಡು ಗಂಟೆಗಳಲ್ಲೇ ಸಾವಿರಾರು ಕಾರ್ಡ್‌ಗಳನ್ನು ಡಿಸೈನ್ ಮಾಡಿ ಪ್ರಿಂಟ್ ಆಗಿ ನಮ್ಮ ಕೈಸೇರುತ್ತವೆ.

ಕಾರ್ಯಕ್ರಮದ ಸವಿಯೊಂದಿಗೆ ದಿನಪೂರ್ತಿ ನಿಮ್ಮ ಪ್ರೀತಿಪಾತ್ರರ ಮನೆಯ ಕಂಪನ್ನು ಹೆಚ್ಚಿಸುವ ಆಲೋಚನೆ ಇದ್ದರೆ ಖಂಡಿತವಾಗಿಯೂ ನೀವು ಸಹ ಈ ಪರಿಮಳ ಸೂಸುವ ಆಮಂತ್ರಣ ಪತ್ರಿಕೆಯ ಬೆನ್ನುಹತ್ತಬಹುದು. ■

ಪದಬಂಧ ಹಾಗೂ ಪ್ರಶ್ನಾಂಕಣ ಲೇಖಕರಿಗೆ ಅನಾರೋಗ್ಯದ ಕಾರಣ ಈ ವಾರವೂ ಅಂಕಣ ಪ್ರಕಟವಾಗುತ್ತಿಲ್ಲ. ಅಡಚಣೆಗಾಗಿ ವಿಷಾದಿಸುತ್ತೇವೆ. ಅವರು ಹುಷಾರಾದ ಕೂಡಲೇ ಎಂದಿನಂತೆ ಇದನ್ನು ಪ್ರಕಟಿಸುತ್ತೇವೆ. —ಸಂ